ಇ) ಈ ಕೆಳಕಂಡಂತೆ ವೈದ್ಯರನ್ನು ನೇಮಿಸಿದೆ.

	ಮಂಜೂರು	ಹಾಲಿಕೆಲಸ	ನಿರ್ವಹಿಸುತ್ತಿರುವುದು	ಖಾಲಿ
೧. ಪ್ರಾ.ಆ.ಘಟಕ, ಹರಕೋಡ,	೧	—		೧
೨. ಪ್ರಾ.ಆ.ಕೇಂದ್ರ, ಜಳೂರು (ಉಜಳಾಂಬ)	೧	೧		—
೩. ಪ್ರಾ.ಆ.ಘಟಕ, ಫೋಟಾಳ	೧	—		೧
೪. ಸಾರ್ವಜನಿಕ ಆಸ್ಪತ್ರೆ, ಬಸವ ಕಲ್ಯಾಣ.	೪	೪		—

ಈ) ಖಾಲಿ ಇರುವ ಸ್ಥಳಗಳಿಗೆ ಸಧ್ಯದಲ್ಲೇ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೆಲ್ದರ್ಜೆಗೇರಿಸುವ ಬಗ್ಗೆ

೯೦೭ (೧೫೪೯) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪ್ರಾಥಮಿಕ ಆರೋಗ್ಯ ಘಟಕವನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಯೋಜನೆ ಸರ್ಕಾರಕ್ಕಿದೆಯೇ ?

ಆ) ತಾಲ್ಲೂಕಿನ ಪ್ರಮುಖ ಕೇಂದ್ರಗಳಲ್ಲೊಂದಾದ ಬೈಂದೂರಿನಲ್ಲಿ ಈ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾದರೂ ಕ್ರಮ ಕೈಗೊಳ್ಳುವುದೇ ?

ಇ) ಈ ಘಟಕದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ : ಎಷ್ಟು ? ಇವುಗಳನ್ನು ಎಂದು ಭರ್ತಿ ಮಾಡಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ಪರಿಶೀಲಿಸಲಾಗುವುದು.

ಇ) ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ೩೫ ಹುದ್ದೆಗಳಪೈಕಿ ೭ ಹುದ್ದೆಗಳು ಖಾಲಿಇದ್ದು, ಈ ಹುದ್ದೆಗಳನ್ನು ತುಂಬಲು ಅದಷ್ಟು ಶೀಘ್ರಕ್ರಮ ಕೈಗೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಇಟ್ಕಲ್ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಔಷಧಿಗಳ ದುರ್ವ್ಯವಹಾರ

೯೦೮ (೧೦೦೭) ಶ್ರೀ ಬಸಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕಿನ ಇಟ್ಕಲ್ ಪ್ರಾಥಮಿಕ ಆರೋಗ್ಯ ಘಟಕಕ್ಕೆ ೧೯೮೮-೮೯ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ಔಷಧಗಳು ಮಂಜೂರಾತಿಯಾಗಿ ಉಪಯೋಗಿಸದೇ ಅವ್ಯವಹಾರವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಮಂಜೂರಾದ ಔಷಧಿಗಳ ಪ್ರಮಾಣ ಹಾಗೂ ಬೆಲೆ ಎಷ್ಟು ?

ಇ) ಇಟ್ಕಲ್ ಪ್ರಾಥಮಿಕ ಆರೋಗ್ಯ ಘಟಕದ ಔಷಧವನ್ನು ಅವ್ಯವಹಾರ ಮಾಡಿದವರ ವಿರುದ್ಧ ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.